

ಎಂದು ನಮ್ಮನ್ನು ನಿರುತ್ಸಾಹಗೊಳಿಸಿದ್ದರು. ಜಮ್ಮು–ಕಾಶ್ಮೀರ ಸರ್ಕಾರಿ ಆರ್ಟ್ ಎಂಪೋರಿಯಮ್, ಶಂಕರಾಚಾರ್ಯ ಮಂದಿರ, ಪರಿ ಮಹಲ್, ಮೊಘಲ್‌ರ ಉದ್ಯಾನವನ ಮುಂತಾದ ಶ್ರೀನಗರದ ಸ್ಥಳೀಯ ತಾಣಗಳನ್ನು ತಿರುಗಿಸಿ ಆಟೋವಾಲಾ, ನಮ್ಮನ್ನು ಟುಲಿಪ್ ಗಾರ್ಡನ್‌ಗೆ ತಂದಿಳಿಸಿದ್ದ. ಟಿಕೇಟ್ ಕೊಂಡು ಒಳ ಹೋಗುತ್ತಿದ್ದಂತೆ ಗಂಟುಹಾಕಿಕೊಂಡಿದ್ದ ನಮ್ಮ ಮುಖ ಅರಳಿತ್ತು. ಏಷ್ಯಾದಲ್ಲೇ ಅತ್ಯಂತ ದೊಡ್ಡದಾದ ಟುಲಿಪ್ ತೋಟವನ್ನು ಪ್ರವೇಶಿಸಿದ್ದೆವು.

## ಅದ್ಭುತ ಬಣ್ಣದ ಲೋಕ!

ಭವ್ಯವಾದ ಜಬರವಾನ್ ಪರ್ವತ ಶ್ರೇಣಿಯ ಹಿನ್ನೆಲೆಯಲ್ಲಿ ಕಣ್ಣು ಹಾಯಿಸಿದಷ್ಟೂ ದೂರ ಬಣ್ಣ ಬಣ್ಣದ ಹೂವಿನ ಹಾಸು. ಪಾರ್ಟಿಗಳ ಡೆಕೊರೇಷನ್‌ನಲ್ಲಷ್ಟೇ ನೋಡಿದ ವಿರಳಾತಿವಿರಳವಾದ ಟುಲಿಪ್ ಹೂವನ್ನು ಕಣ್ಣೆದುರೇ ನೋಡಿ ಮನಸ್ಸು ಮುದಗೊಂಡಿತ್ತು.

ಕೆಂಪು, ಕೇಸರಿ, ಹಳದಿ, ನೇರಳೆ, ಗುಲಾಬಿ, ಬಿಳಿ — ಲೆಕ್ಕ ಮಾಡಿ ಪೂರೈಸಲಾಗದಷ್ಟು ಬಣ್ಣಗಳೂ ತಳಿಗಳೂ ಅಲ್ಲಿದ್ದವು. ಸಂಜೆಯ ತಂಪಾದ ಗಾಳಿ, ಕಾರಂಜಿಯ ಚಿಲುಮೆ, ವಿಶ್ರಮಿಸಲು ವಿಲ್ಲೋ ಮರದ ನೆರಳು, ಕಣ್ಣಿಗೆ ತಂಪಾದ ಹೂಗಳ ಬಳಗ, ಇದರೊಟ್ಟಿಗೆ ನಮ್ಮ ಯೋಜನೆ ಸಾರ್ಥಕವಾಗಿತ್ತು.

'ಇಲ್ಲೇನು, ಹೆಚ್ಚೆಂದರೆ ಮುಕ್ಕಾಲು ಗಂಟೆ ಸಮಯ ಕಳೆಯುವರು' ಎಂದ ಊಹಿಸಿದ್ದ ಆಟೋವಾಲಾಗೆ ನಾವು ಎರಡು ತಾಸಿನ ಸಮಯದ ನಂತರ ಹೋಗಿದ್ದು ಆಶ್ಚರ್ಯಕರವಾಗಿ ಕಂಡಿತ್ತು. ಟುಲಿಪ್ ಗಾರ್ಡನ್ ನಮ್ಮ ಮೇಲೆ ಮಾಡಿದ ಮೋಡಿಯೇ ಹಾಗಿತ್ತು!

## ಒಂದು ತಿಂಗಳ ಹಬ್ಬ

'ಶಿರಾಜ್ ಭಾಗ್' ಎಂದು ಮೊದಲು ಕರೆಸಿಕೊಳ್ಳುತ್ತಿದ್ದ 'ಇಂದಿರಾ ಗಾಂಧೀ ಮೆಮೋರಿಯಲ್ ಟುಲಿಪ್ ಗಾರ್ಡನ್' ಆರಂಭವಾದುದು 2008ರಲ್ಲಿ. ಕಾಶ್ಮೀರದ ಚಳಿಗಾಲದ ಪ್ರವಾಸೋದ್ಯಮವನ್ನು ವಸಂತ ಋತುವಿಗೂ ವಿಸ್ತರಿಸುವ ಯೋಜನೆ ಅದಾಗಿತ್ತು. ಅಂದಿನಿಂದ ಪ್ರತಿ ವರ್ಷವೂ ಒಂದು ತಿಂಗಳ ಕಾಲ ಟುಲಿಪ್ ಹಬ್ಬವನ್ನು ಪ್ರವಾಸಿಗರೊಡನೆ ಆಚರಿಸಲಾಗುತ್ತಿದೆ. ಕೋವಿಡ್ ಆರ್ಭಟ ತಗ್ಗಿದ 2 ವರ್ಷಗಳ ನಂತರ ಗಾರ್ಡನ್ ಅನ್ನು ಈ ವರ್ಷ ಮತ್ತೆ ತೆರೆಯಲಾಗಿತ್ತು. 35 ಹೆಕ್ಟೇರ್ ವಿಸ್ತಾರವಾದ ಬಯಲಿನಲ್ಲಿ ಬಣ್ಣ ಬಣ್ಣದ 15 ಲಕ್ಷಕ್ಕೂ ಹೆಚ್ಚು ಹೂಗಳು, 68 ತಳಿಗಳಿಂದ ನಳನಳಿಸುತ್ತಿದ್ದ ಟುಲಿಪ್‌ಗಳು ಒಂದು ತಿಂಗಳ ತಮ್ಮ ಚಂದದ ಜೀವನವನ್ನು ಮುಗಿಸಿ ಏಪ್ರಿಲ್ 18ರಂದು ಪ್ರವಾಸಿಗರಿಗೆ ವಿದಾಯ ಹೇಳಿದವು. ಈ ಬಾರಿಯಂತೂ ನಿರೀಕ್ಷೆಗೂ ಮೀರಿದ, ಕಳೆದ ಹತ್ತು ವರ್ಷಗಳ ದಾಖಲೆ ಮುರಿದು, ಮೂರೂವರೆ ಲಕ್ಷ ಪ್ರವಾಸಿಗರ ಭೇಟಿಗೆ ಟುಲಿಪ್ ಗಾರ್ಡನ್ ಸಾಕ್ಷಿಯಾಗಿತ್ತು.

## ವಸಂತದ ತೇರು

ಕಾಶ್ಮೀರದ ಕಣಿವೆಯಲ್ಲಿ ವಸಂತದ ತೇರೆಳೆಯಲು ಟುಲಿಪ್‌ಗಳಷ್ಟೇ ಅಲ್ಲದೆ, ವಿವಿಧ ಗಿಡಮರಗಳೂ ಕಾಯುತ್ತಿರುತ್ತವೆ. ಸೇಬು, ಬಾದಾಮಿ, ಪಿಯರ್, ಚೆರ್ರಿ, ಅಕ್ರೂಟ್ ಮರಗಳಲ್ಲದೆ ಪ್ಯಾನ್ಸಿ, ಪೆಟುನಿಯಾ, ನೆಮೆಸಿಯಾ, ಡೆಫೊಡಿಲ್ ಮುಂತಾದ ಗಿಡಗಳು ಹೂ ಬಿಟ್ಟು ನಲಿಯುತ್ತಿರುತ್ತವೆ. ಸಸ್ಯಪ್ರೇಮಿಗಳಿಗೆ ಕಾಶ್ಮೀರದ ಸಸ್ಯಸಂಪತ್ತಿನ ಪರಿಚಯಕ್ಕೆ ಏಪ್ರಿಲ್ ಬಹಳ ಸೂಕ್ತ ಕಾಲ.

## ಹವಾಮಾನ ಬದಲಾವಣೆ?

ಪ್ರತಿ ವರುಷವೂ ಶ್ರೀನಗರದಲ್ಲಿ ಟುಲಿಪ್ ಫೆಸ್ಟಿವಲ್ ನಡೆಯುವ ಕಾಲ ಏಪ್ರಿಲ್ ತಿಂಗಳು. ಆದರೆ ಈ ಬಾರಿ ಹೂಗಳು ಅವಧಿಗಿಂತ ಬೇಗ ಅರಳಿದ್ದವು, ಮಾರ್ಚ್ ಕೊನೆಯ ವಾರದಲ್ಲೇ ಟುಲಿಪ್ ತೋಟವನ್ನು ಉದ್ಘಾಟಿಸಲಾಗಿತ್ತು. ದಿನದ ತಾಪಮಾನ ಹೆಚ್ಚಾದ ಕಾರಣ ಟುಲಿಪ್‌ಗಳು ಬೇಗ ಬಾಡಿ, ಏಪ್ರಿಲ್ ತಿಂಗಳ ಮಧ್ಯೆ ಗಾರ್ಡನ್ ಮುಚ್ಚುವ ನಿರ್ಧಾರವನ್ನು ಸರ್ಕಾರ ಕೈಗೊಂಡಿತು. ಇದರಿಂದ ಬಹಳಷ್ಟು ಪ್ರವಾಸಿಗರ ಯೋಜನೆ ಬುಡಮೇಲಾಯಿತು.

ಇದೇ ಮೊದಲ ಬಾರಿಗೆ ಕಾಶ್ಮೀರದ ಸ್ಥಳೀಯರೂ ಕೂಡಾ ಜೂನ್‌ನಲ್ಲಿ ಕಾಣಬೇಕಿದ್ದ ಬೇಸಿಗೆಯ ಝಳವನ್ನು ಮಾರ್ಚ್ ತಿಂಗಳಲ್ಲಿಯೇ ಅನುಭವಿಸಿದರು. ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆಗಳ ಬಿಸಿ ಹಿಮದ ತವರಿಗೂ ತಟ್ಟಿದೆ.

ಇವೆಲ್ಲ ಏನೇ ಇದ್ದರೂ, ನಮಗಂತೂ ಕಾಶ್ಮೀರದ ಈ ಪ್ರವಾಸವನ್ನು ಟುಲಿಪ್ ಗಾರ್ಡನ್‌ನ ಕುಸುಮಗಳು ಎಂದೂ ಬಾಡದ ಅವಿಸ್ಮರಣೀಯ ನೆನಪುಗಳನ್ನು ಅರಳಿಸಿದ್ದು ಸುಳ್ಳಲ್ಲ.

ಪ್ರತಿಕ್ರಿಯಿಸಿ: feedback@sudha.co.in

## ನಾಲ್ಕು ವಾರಗಳ ಜೀವನ

ಮಧ್ಯ ಏಷ್ಯಾದಲ್ಲಿ ಉಗಮವಾದ ಟುಲಿಪ್ ಸಸ್ಯಗಳನ್ನು ಉಳಿಸಿ ಬೆಳೆಸಿದ್ದು ಟರ್ಕಿ, ಪರ್ಷಿಯಾ ದೇಶಗಳು. 15ನೇ ಶತಮಾನದ ಒಟ್ಟೋಮನ್ ಸಾಮ್ರಾಜ್ಯದಲ್ಲಿ ಪ್ರಾಮುಖ್ಯ ಪಡೆದಿದ್ದ ಟುಲಿಪ್‌ಗಳು ಸುಲ್ತಾನರ 'ಪೇಟ'ದಲ್ಲಿ ಜಾಗ ಗಳಿಸಿದ್ದವು. ಪರ್ಷಿಯನ್ ಭಾಷೆಯಲ್ಲಿ 'ಪೇಟ'ಕ್ಕೆ 'ಟುಲಿಪ್' ಎಂಬ ಪದವಿದೆ. ನಿಧಾನವಾಗಿ ಟುಲಿಪ್ ಬೆಳೆ ಯೂರೋಪ್ ದೇಶಗಳಿಗೂ ವಿಸ್ತರಿಸಿತು. ಡಚ್ಚರೇ ಟುಲಿಪ್ ಹೂಗಳ ಬೆಳೆ, ವ್ಯಾಪಾರದಲ್ಲಿ ಮೊದಲಿಗರು.

ಟುಲಿಪ್ ಹೂಗಳು ಜೀವ ತಾಳುವುದು ವಸಂತ ಋತುವಿನಲ್ಲಿ, ಮಣ್ಣೊಳಗಿನ ಗಡ್ಡೆಗಳಿಂದ. ಸುದೀರ್ಘ ಶೀತವನ್ನು ಅನುಸರಿಸಿ ಬರುವ ತಂಪಾದ ವಸಂತದ ವಾತಾವರಣ ಇವುಗಳ ಬೆಳವಣಿಗೆಗೆ ಅತಿ ಅಗತ್ಯ. ಗಂಟೆಯಾಕಾರದ ಈ ಹೂಗಳ ಜೀವಿತಾವಧಿ ಮೂರರಿಂದ ನಾಲ್ಕು ವಾರಗಳು ಮಾತ್ರ. ಹೂ ಮತ್ತು ಎಲೆಗಳು ಪೂರ್ತಿ ಬಾಡಿದ ನಂತರ ಗಡ್ಡೆಗಳನ್ನು ಕಿತ್ತು ಸ್ವಚ್ಛಗೊಳಿಸಿ ನೆರಳಲ್ಲಿ ಸಂಗ್ರಹಿಸಿಡಲಾಗುತ್ತದೆ. ಇದೇ ಗಡ್ಡೆಗಳನ್ನು ನವೆಂಬರ್ ಚಳಿಯ ಶುರುವಾತಿನಲ್ಲಿ ಮತ್ತೆ ಮಣ್ಣಿನ ಮಡಿಯಲ್ಲಿ ಬಚ್ಚಿಡಲಾಗುತ್ತದೆ. ನಾಲ್ಕು ತಿಂಗಳ ತಂಪನ್ನು ತಿಂದು ಮಾರ್ಚ್ ತಿಂಗಳ ಶುರುವಾತಿನಲ್ಲಿ ಎಲೆಗಳು ಮೊಳೆಯುತ್ತವೆ ಮತ್ತು ಏಪ್ರಿಲ್‌ನಲ್ಲಿ ಗಾರ್ಡನ್ ಹೂಗಳಿಂದ ಸಜ್ಜಾಗುತ್ತದೆ.